ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 86-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರೈತ ಮಹಿಳೆ ಮತ್ತು ಭೂ ಒಡೆತನ

**ಡಾ. ನಯಾಜ್ ಅಹ್ಮದ್**

ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಶಿವಮೊಗ್ಗ

**Abstract:**

*ಕೃಷಿಯನ್ನು ಗ್ರಾಮೀಣ ಜನತೆಯ ಬೆನ್ನೆಲುಬು ಎನ್ನುವುದಾದರೆ, ಅಂತಹ ಕೃಷಿಕಾರ್ಯವನ್ನು ತಲೆತಲಾಂತರಗಳಿಂದಲೂ ಯಶಸ್ವಿಯಾಗಿ ಮುಂದುವರೆಸಿಕೊಂಡು ಬಂದಿರುವ ಕೃಷಿ ಕುಟುಂಬಗಳ ಬೆನ್ನೆಲುಬು ಎಂದರೆ ಗ್ರಾಮೀಣ ಮಹಿಳೆಯರು. ಕೃಷಿ ಕಾರ್ಯಗಳಲ್ಲಿ ಗ್ರಾಮೀಣ ಪುರುಷರು ವರ್ಷದ ಕೆಲವು ತಿಂಗಳುಗಳು ಮಾತ್ರ ಬಿಡುವಿಲ್ಲದೆ ದುಡಿಯುವವರಾಗಿದ್ದಾರೆ. ಇದಕ್ಕೆ ಪ್ರತಿಯಾಗಿ ಗ್ರಾಮೀಣ ಮಹಿಳೆಯರು ವರ್ಷಪೂರ್ತಿ ದುಡಿಯುವರಾಗಿದ್ದಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು ಭೂ ಒಡೆತನದ ವಿಚಾರದಲ್ಲಿ ಹಿಂದುಳಿದಿದ್ದಾರೆ. ದೇಶದಲ್ಲಿ ಕೃಷಿ ಭೂಮಿಯ ಮಾಲಿಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಅತ್ಯಲ್ಪವಾಗಿದೆ. ವಿಶ್ವ ಸಂಸ್ಥೆಯು 2026ನ್ನು ಅಂತರರಾಷ್ಟ್ರೀಯ ಕೃಷಿಕರ ವರ್ಷವೆಂದು ಘೋಷಿಸಿದೆ. ಇದು ಭಾರತದ ಕೃಷಿ ಕ್ಷೇತ್ರದಲ್ಲಿರುವ ಲಿಂಗ ಅಂತರದ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿದೆ. ಪ್ರಸ್ತುತ ಅಧ್ಯಯನವು ಗ್ರಾಮೀಣ ಕೃಷಿಕ ಮಹಿಳೆಯರ ಭೂ ಒಡೆತನವನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲೂಕಿನ ಅತ್ತಿಮೊಗ್ಗೆ ಗ್ರಾಮದ ಕೃಷಿಕುಟುಂಬದ 50 ಮಹಿಳೆಯರನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಕೃಷಿ ಕುಟುಂಬದ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಮತ್ತು ಕೃಷಿಯಲ್ಲಿನ ಅವರ ಒಡೆತನದ ಮೇಲೆ ಬೆಳಕು ಚೆಲ್ಲುವುದಾಗಿದೆ.*

**Keywords:** *ಗ್ರಾಮೀಣ ಮಹಿಳೆ, ರೈತರು, ಭೂ ಒಡೆತನ, ಭೂಮಿಯ ಸರಕೀಕರಣ, ಹಿಂದೂ ಉತ್ತರಾಧಿಕಾರ ಕಾಯ್ದೆ*

## ಪೀಠಿಕೆ

ಭಾರತದಲ್ಲಿ ಅತೀಹೆಚ್ಚು ಜನರಿಗೆ ಕೃಷಿಯೇ ಜೀವನಾಧಾರ. ಆದರೆ ಕೃಷಿಗೆ ಮಹಿಳೆಯರೇ ಜೀವಾಳ. ಕೇಂದ್ರ ಸರ್ಕಾರದ ಮಾಹಿತಿಯ ಪ್ರಕಾರ ದೇಶದ ಶೇಕಡ 80ರಷ್ಟು ಗ್ರಾಮೀಣ ಭಾಗದ ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು ಭೂ ಒಡೆತನದ ವಿಚಾರದಲ್ಲಿ ಹಿಂದುಳಿದಿದ್ದಾರೆ. ದೇಶದಲ್ಲಿ ಕೃಷಿ ಭೂಮಿಯ ಮಾಲಿಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಅತ್ಯಲ್ಪವಾಗಿದೆ. ವಿಶ್ವ ಸಂಸ್ಥೆಯು 2026ನ್ನು ಅಂತರರಾಷ್ಟ್ರೀಯ ಕೃಷಿಕರ ವರ್ಷವೆಂದು ಘೋಷಿಸಿದೆ. ಇದು ಭಾರತದ ಕೃಷಿ ಕ್ಷೇತ್ರದಲ್ಲಿರುವ

**Please cite this article as:** ನಯಾಜ್ ಅಹ್ಮದ್. (2026). ರೈತ ಮಹಿಳೆ ಮತ್ತು ಭೂ ಒಡೆತನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 86–93

ಲಿಂಗ ಅಂತರದ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿದೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು 2026ರನ್ನು ಅಂತರರಾಷ್ಟ್ರೀಯ ಮಹಿಳಾ ಕೃಷಿಕರ ವರ್ಷ ಎಂದು ಘೋಷಿಸಿದೆ. ಕೃಷಿರಂಗದಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸುತ್ತಿದ್ದರೂ, ಅದಕ್ಕೆ ತಕ್ಕಂತೆ ಅವರಿಗೆ ಸಮಾನವಾದ ಹಕ್ಕುಗಳು ಲಭ್ಯವಾಗಿಲ್ಲ. ಆಹಾರ ಉತ್ಪಾದನೆಯಲ್ಲಿ ಅವರು ವಹಿಸುತ್ತಿರುವ ಪಾತ್ರವು ಬಹುತೇಕ ಯಾರ ಗಮನಕ್ಕೂ ಬರುತ್ತಿಲ್ಲ. ಕೃಷಿಗೆ ಜಾಗತಿಕ ಆಹಾರ ಭದ್ರತೆಗೆ ಮಹಿಳೆಯರು ನೀಡುತ್ತಿರುವ ಕೊಡುಗೆಯನ್ನು ಗುರುತಿಸುತ್ತಲೇ, ಕೃಷಿ ರಂಗದಲ್ಲಿರುವ ಲಿಂಗ ಅಂತರವನ್ನು ತೊಡೆದುಹಾಕುವ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಶ್ವಸಂಸ್ಥೆಯು ಹೇಳಿದೆ. ವಿಶ್ವಸಂಸ್ಥೆಯ ಘೋಷಣೆಯ ಆಶಯದ ಬೆಳಕಿನಲ್ಲಿ ನೋಡಿದರೆ, ಭಾರತದಲ್ಲಿ ಭೂ ಒಡೆತನದ ವಿಚಾರದಲ್ಲಿರುವ ಲಿಂಗ ಅಂತರವು ಎದ್ದು ಕಾಣುತ್ತದೆ.

ಭಾರತದಲ್ಲಿ ಕೃಷಿಗೆ ಮಹಿಳೆಯರೇ ಆಧಾರ. ರಾಷ್ಟ್ರೀಯ ಮಹಿಳಾ ಆಯೋಗವು ಕೃಷಿಯಲ್ಲಿ ಮಹಿಳೆಯರು ಮತ್ತು ಪುರುಷರು ವಹಿಸುವ ಪಾತ್ರದ ಬಗ್ಗೆ ಅಧ್ಯಯನ ನಡೆಸಿದೆ. ಹೊಲ ಉಳುವುದು, ನೀರಾವರಿ ಮಾರುಕಟ್ಟೆ ಸೇರಿದಂತೆ ಪುರುಷರದ್ದು ಸೀಮಿತ ಪಾತ್ರವಾಗಿದೆ. ಉಳಿದ ಬಹುತೇಕ ಎಲ್ಲಾ ಕೆಲಸ ಜವಾಬ್ದಾರಿಗಳನ್ನು ನಿರ್ವಹಿಸುವುದು ಮಹಿಳೆಯರೇ ಎಂದು ವರದಿ ಉಲ್ಲೇಖಿಸಿದೆ. ಹೊಲವನ್ನು ಹದಗೊಳಿಸುವುದರಿಂದ ಹಿಡಿದು ಬೀಜ ಬಿತ್ತನೆ, ಕಳೆತೆಗೆಯುವುದು, ಕೊಯ್ಲೋತ್ತರ ಕೆಲಸಗಳು ಎಲ್ಲದರಲ್ಲೂ ಮಹಿಳೆಯರೇ ಮುಂದಿರುತ್ತಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು ಜಮೀನು ಮಾಲಿಕತ್ವದ ವಿಚಾರದಲ್ಲಿ ಹಿಂದುಳಿದಿದ್ದಾರೆ.

ಭಾರತದಲ್ಲಿ ಜೀವನದ ಬಹುತೇಕ ವಲಯಗಳಲ್ಲಿ ಇಂದಿಗೂ ಪುರುಷ ಪ್ರಧಾನ ವ್ಯವಸ್ಥೆಯೇ ಇದೆ. ಇತ್ತೀಚಿನ ದಶಕಗಳಲ್ಲಿ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದರಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಪುರುಷರಿಗೆ ಸಮಾನರಾಗಿ ಮುನ್ನುಗ್ಗುತ್ತಿದ್ದಾರೆ. ಹಲವು ವಲಯಗಳಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ. ಜೊತೆಗೆ ಹಿಂದೂ ಉತ್ತರಾಧಿಕಾರ ಕಾಯ್ದೆಯ ಪ್ರಕಾರ ಹೆಣ್ಣುಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡುವುದು ಕಡ್ಡಾಯವಾಗಿದೆ. ಆದರೂ ಮಹಿಳೆಯರ ಭೂ ಒಡೆತನದ ಪ್ರಮಾಣ ಅತ್ಯಲ್ಪವಾಗಿದೆ.

**ಕೃಷಿ ಭೂಮಿಯ ಒಡೆತನ**

ಕೃಷಿ ಭೂಮಿಯ ಒಡೆತನ ಎಂದರೆ ಕೃಷಿ ಉದ್ದೇಶಕ್ಕಾಗಿ ಬಳಸುವ ಭೂಮಿಯನ್ನು ಹೊಂದಲು, ಬಳಸಲು, ಕೃಷಿಮಾಡಲು ಮತ್ತು ವರ್ಗಾಯಿಸಲು ವ್ಯಕ್ತಿ, ಕುಟುಂಬ, ಸಮುದಾಯ ಅಥವಾ ಸಂಸ್ಥೆಗೆ ಇರುವ ಕಾನೂನುಬದ್ಧ ಹಕ್ಕು. ಕೇಂದ್ರ ಸರ್ಕಾರದ ಮಾಹಿತಿಯ ಪ್ರಕಾರ ದೇಶದ ಶೇಕಡ 80ರಷ್ಟು ಗ್ರಾಮೀಣ ಭಾಗದ ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು ಭೂ ಒಡೆತನದ ವಿಚಾರದಲ್ಲಿ ಹಿಂದುಳಿದಿದ್ದಾರೆ. ದೇಶದಲ್ಲಿ ಕೃಷಿ ಭೂಮಿಯ ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಅತ್ಯಲ್ಪವಾಗಿದೆ.

**ಭೂಮಿಯ ಸರಕೀಕರಣ**

ಭೂಮಿಯು ಮಾರುಕಟ್ಟೆಯ ವಸ್ತುವಾಗಿ ಗುರುತಿಸಲ್ಪಡುವುದನ್ನು ಭೂಮಿಯ ಸರಕೀಕರಣ ಎನ್ನಬಹುದು. ಭೂಮಿಯನ್ನು ಮಾರಾಟದ ದೃಷ್ಟಿಯಲ್ಲಿ ಕೊಂಡುಕೊಳ್ಳುವ ಜನರ ಸಂಖ್ಯೆಯು ಕ್ರಮೇಣವಾಗಿ ಅಧಿಕವಾಗ ತೊಡಗಿದೆ. ಜೊತೆಗೆ ಭೂಮಿಗಿರುವ ಬೇಡಿಕೆ ಕೂಡ ಹೆಚ್ಚುತ್ತಾ ಹೋಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಭೂಮಿಯನ್ನು ಒಡೆತನಕ್ಕಾಗಿ ಹೊಂದುವಲ್ಲಿಯೇ ಸ್ಪರ್ಧೆ ನಡೆಯುವಂತಾಗಿದೆ.

**ಕೋಷ್ಟಕ 01: ಕೃಷಿ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪ್ರಮಾಣ**

| ಕೃಷಿ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪ್ರಮಾಣ | ಮಹಿಳಾ ಕೂಲಿ ಕಾರ್ಮಿಕರ ಪ್ರಮಾಣ | ಸ್ವಂತ ಉದ್ಯೋಗದಲ್ಲಿ ದುಡಿಯುತ್ತಿರುವ ಮಹಿಳೆಯರ ಪ್ರಮಾಣ | ಭೂ ಒಡೆತನ ಹೊಂದಿರುವ ರೈತ ಮಹಿಳೆಯರ ಪ್ರಮಾಣ |
|---|---|---|---|
| 80% | 33% | 47% | 14% |

**ಮೂಲ:** ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ಮಾರ್ಚ್ 27, 2026

**ಆರ್ಥಿಕ ಸಂಪನ್ಮೂಲ**

ಭೂಮಿ ಎನ್ನುವುದು ಇಂದು ಕೇವಲ ಜೀವನೋಪಾಯದ ಮಾರ್ಗವಾಗಿ ಉಳಿದಿಲ್ಲ. ಸಣ್ಣ ಮತ್ತು ಅತಿಸಣ್ಣ ರೈತರೇ ಹೆಚ್ಚಾಗಿರುವ ದೇಶದಲ್ಲಿ ಭೂಮಿಯೂ ಪ್ರಮುಖ ಆರ್ಥಿಕ ಸಂಪನ್ಮೂವಾಗಿದೆ. ದುಡಿಮೆಯಲ್ಲಿ ಹೆಚ್ಚಿನ ಪಾಲು ಮಹಿಳೆಯರದ್ದೇ ಆದರೂ, ಆರ್ಥಿಕ ಸಂಪನ್ಮೂಲದ ಮೇಲಿನ ಹಕ್ಕಿನ ವಿಚಾರದಲ್ಲಿ ಆಕೆಯ ಪಾತ್ರ ಇಂದಿಗೂ ಅತ್ಯಂತ ಸೀಮಿತವಾಗಿದೆ.

ಭಾರತದಲ್ಲಿ ಮಹಿಳೆಯರ ಭೂ ಹಕ್ಕಿಗೆ ಸಂಬಂಧಿಸಿದಂತೆ ನಿಖರವಾದ ಇತ್ತೀಚಿನ ಅಧಿಕೃತ ದತ್ತಾಂಶವೇ ಸಿಗುವುದಿಲ್ಲ. ಅದರ ಬಗ್ಗೆ ಗಂಭೀರವಾದ ಅಧ್ಯಯನ ಹಾಗೂ ಮಾಹಿತಿ ಸಂಗ್ರಹಣೆಗೆ ಸರ್ಕಾರಗಳು ಪ್ರಯತ್ನ ಮಾಡುತ್ತಿಲ್ಲ. ಲಭ್ಯವಿರುವ ಮಾಹಿತಿಯಂತೆ, ಬಾರತದಲ್ಲಿ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣವು (ಏಕಮಾಲೀಕತ್ವ ಅಥವಾ ಜಂಟಿ) ಅತ್ಯಂತ ನಿಧಾನಗತಿಯಲ್ಲಿ ಹೆಚ್ಚಾಗುತ್ತಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್.ಎಫ್.ಎಚ್.ಎಸ್) ಪ್ರಕಾರ 15–49 ವರ್ಷದ ಮಹಿಳೆಯರಲ್ಲಿ 2015–16ರಲ್ಲಿ ಈ ಪ್ರಮಾಣ ಶೇಕಡ 28.3ರಷ್ಟಿತ್ತು. 2019–20ರ ವೇಳೆಗೆ ಅದು 31.7ಕ್ಕೆ ಹೆಚ್ಚಾಗಿತ್ತು. 2005–06ರ ಕೃಷಿ ಗಣತಿಯ ಪ್ರಕಾರ ದೇಶದಲ್ಲಿ ಭೂ ಒಡೆತನ ಹೊಂದಿದ್ದ ರೈತ ಮಹಿಳೆಯರ ಪ್ರಮಾಣವು ಶೇಕಡ 11 ರಷ್ಟಿತ್ತು. 2010–11ರ ಹೊತ್ತಿಗೆ ಶೇಕಡ 12.8ಕ್ಕೆ ಏರಿದ ಈ ಪ್ರಮಾಣವು 2015–16ರ ಕೃಷಿ ಗಣತಿಯ ಹೊತ್ತಿಗೆ ಶೇಕಡ 13.9ರಷ್ಟಾಗಿತ್ತು. (ಪ್ರಜಾವಾಣಿ, ಮಾರ್ಚ್ 27, 2026).

**ಹಲವು ಅಡ್ಡಿಗಳು**

ಭೂ ಒಡೆತನಕ್ಕೆ ಸಂಬಂಧಪಟ್ಟ ಕಾನೂನು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಲ್ಲಿದೆ. ಕರ್ನಾಟಕದಲ್ಲಿ ಪ್ರಸ್ತುತ ತಂದೆ ತಾಯಿ ಮೃತಪಟ್ಟ ನಂತರ ಹೆಣ್ಣುಮಕ್ಕಳ ಹೆಸರುಗಳೂ ಭೂ ದಾಖಲೆಯಲ್ಲಿ ನಮೂದಾಗುತ್ತಿವೆ. ಸ್ತ್ರೀಯರ ಭೂ ಒಡೆತನಕ್ಕೂ ಅವರ ಆರ್ಥಿಕ ಸ್ವಾತಂತ್ರ್ಯ ಕೃಷಿ ಉತ್ಪಾದನೆಗೂ ನೇರವಾದ ಸಂಬಂಧವಿದೆ ಎಂದು ಹಲವು ಅಧ್ಯಯನಗಳು ಉಲ್ಲೇಖಿಸಿವೆ. ಆದರೆ ಭೂ ಒಡೆತನ ಪಡೆಯುವ ವಿಚಾರದಲ್ಲಿ ಮಹಿಳೆಯರಿಗೆ ಸಾಮಾಜಿಕ ನಿಲುವುಗಳು, ಪರಂಪರಾಗತ ಪದ್ಧತಿಗಳು, ಕಾನೂನಿನ ತಿಳುವಳಿಕೆಯ ಕೊರತೆ ಮತ್ತು ಪುರುಷ ಪ್ರಧಾನ ಧೋರಣೆಗಳು ಪ್ರಮುಖ ಅಡ್ಡಿಗಳಾಗಿವೆ ಎಂದು ವಿಶ್ಲೇಷಿಸಲಾಗಿದೆ. ಕೃಷಿಯು ದೇಶದಲ್ಲಿ ಅತೀ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಿರುವ ಕ್ಷೇತ್ರವಾಗಿದೆ. ಇಂತಹ ವಲಯದಲ್ಲಿ ಭೂ ಒಡೆತನ ಸಾಧಿಸುವುದು ಮಹಿಳಾ ಸಮಾನತೆಯ ಹಾದಿಯಲ್ಲಿ ಮುಖ್ಯ ಹೆಜ್ಜೆಯಾಗಿದೆ.

ಈ ದಿಸೆಯಲ್ಲಿ ಕೃಷಿಯಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸುವುದು, ಭೂಮಿಯ ಲಭ್ಯತೆ, ಅದರ ಸ್ವರೂಪ, ಆರ್ಥಿಕ ನೆರವು, ತಾಂತ್ರಿಕ ತರಬೇತಿ ಮುಂತಾಗಿ ಅವರು ಎದುರಿಸುತ್ತಿರುವ ಸವಾಲು–ಸಮಸ್ಯೆಗಳನ್ನು ಬಗೆಹರಿಸುವುದು, ಅದಕ್ಕೆ ಪೂರಕವಾಗಿ ನೀತಿ ಕಾನೂನು ರೂಪಿಸುವುದು ಆದ್ಯತೆಯಾಗಬೇಕು ಎಂದು ವಿಶ್ವ ಸಂಸ್ಥೆ ಹೇಳಿದೆ.

ರೈತ ಮಹಿಳೆಯರ ಉನ್ನತಿಗಾಗಿ, ಅಭ್ಯುದಯಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದೂ ಅದು ಹೇಳಿದೆ.

**ಸಂಬಳ ವಿಲ್ಲದ ಕೆಲಸ**

ಕೃಷಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಬೇರೊಂದು ಆಯಾಮವಿದೆ. ಪ್ರಸ್ತುತ ಕೃಷಿ ಕಡಿಮೆ ಆದಾಯದ ಮೂಲವಾಗಿರುವುದು ಮತ್ತು ಇತರ ಕಾರಣಗಳಿಂದಾಗಿ ಮಹಿಳೆಯರದ್ದು ಸಂಬಳ ರಹಿತ ದುಡಿಮೆಯಾಗಿದೆ. ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ(ಪಿ.ಎಲ್.ಎಫ್.ಎಸ್) 2024ರ ಪ್ರಕಾರ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯ ದರವೂ 2017ರಲ್ಲಿ ಶೇಕಡ 24.8ಇದ್ದದ್ದು 2023ಕ್ಕೆ ಶೇಕಡ 42ಕ್ಕೆ ಹೆಚ್ಚಾಗಿದೆ. ಅಂದರೆ ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಮಹಿಳೆಯರ ಪ್ರಮಾಣ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಯಂ ಉದ್ಯೋಗ ಎಂದರೆ ಕುಟುಂಬದ ಜಮೀನಿನಲ್ಲಿ ದುಡಿಯುವುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗುವುದೇ ಆಗಿದೆ. ಹೆಚ್ಚಿನ ಮಹಿಳೆಯರು ಪ್ರತಿಫಲವೇ ಇಲ್ಲದ ದುಡಿಮೆಯಲ್ಲಿ ತೊಡಗಿರುವುದನ್ನು ಅದು ಸೂಚಿಸುತ್ತದೆ.

**ಹಿಂದೂ ಉತ್ತರಾಧಿಕಾರ ಕಾಯ್ದೆ**

ಮಹಿಳೆಯರಿಗೆ ಮೂರು ರೀತಿಯಲ್ಲಿ ಭೂ ಒಡೆತನ ಪ್ರಾಪ್ತವಾಗುತ್ತದೆ. ಪಿತ್ರಾರ್ಜಿತವಾಗಿ, ಸರ್ಕಾರದ ಭೂ ಮಂಜೂರಾತಿ ಹಾಗೂ ಖಾಸಗಿ ಭೂಮಿಯನ್ನು ಕಂಡುಕೊಳ್ಳುವ ಮೂಲಕ ಮಹಿಳೆಯರು ಭೂ ಒಡತಿಯರಾಗಬಹುದು. ಪುರುಷರೇ ಕುಟುಂಬದ ಯಜಮಾನರಾಗಿರುವುದ ರಿಂದ ಸರ್ಕಾರಗಳು ಮಂಜೂರು ಮಾಡುವಾಗಲೂ ಬಹುತೇಕ ಸಂದರ್ಭಗಳಲ್ಲಿ ಪುರುಷ ಫಲಾನುಭವಿಗಳಿಗೇ ಮಂಜೂರಾತಿ ಸಿಗುತ್ತದೆ. ಮಹಿಳೆಯರ ಭೂ ಒಡೆತನವನ್ನು ಪ್ರೋತ್ಸಾಹಿಸಲು ಕೆಲವು ರಾಜ್ಯ ಸರ್ಕಾರಗಳು ವಿಶೇಷ ಯೋಜನೆಗಳನ್ನೂ ರೂಪಿಸಿದ್ದವು. (ಉದಾಃ ಆಂಧ್ರ ಪ್ರದೇಶದ "ಭೂಮಿ", ಗುಜರಾತಿನ "ನಾರಿ ಗೌರವ ನೀತಿ") ಮಹಿಳೆಯರು ಜಮೀನನ್ನು ಕಂಡುಕೊಳ್ಳುವ ಮೂಲಕ ಭೂ ಹಕ್ಕು ಪಡೆಯುವುದು ವಿರಳವಾದ ವಿದ್ಯಾಮಾನವಾಗಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವುದು ಅತ್ಯಂತ ಸಾಮಾನ್ಯವಾದ ವಿಧಾನವಾಗಿದೆ. ಭೂಮಿಯ ಹಕ್ಕು ಪಡೆಯುವುದು ವೈಯಕ್ತಿಕ ಕಾನೂನಿನ ಅಡಿಯಲ್ಲಿ ಬರುತ್ತದೆ. ಭಾರತದಲ್ಲಿ ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯಲ್ಲಿ ಹಕ್ಕುಗಳು ಲಭ್ಯವಾಗುತ್ತವೆ. ಉದಾಹರಣೆಗೆ ಹಿಂದೂ ಉತ್ತರಾಧಿಕಾರತ್ವ ಕಾಯ್ದೆ–1956ರ ಪ್ರಕಾರ ಗಂಡು ಮಕ್ಕಳಿಗೆ ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇತ್ತು. ಈ ಕಾಯ್ದೆಗೆ 2005ರಲ್ಲಿ ತಿದ್ದುಪಡಿ ತಂದು ಹೆಣ್ಣು ಮಕ್ಕಳಿಗೂ ಸಮಾನ ಹಕ್ಕು ಕಲ್ಪಿಸಲಾಯಿತು. ಹಿಂದೂಗಳ ಜೊತೆಗೆ ಬೌದ್ಧ, ಸಿಖ್ ಮತ್ತು ಜೈನರಿಗೂ ಇದೇ ಕಾಯ್ದೆ ಅನ್ವಯವಾಗುತ್ತದೆ. ಮುಸ್ಲಿಂ ವೈಯಕ್ತಿಕ ಕಾನೂನು–1937ರ ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಸಿಗುವ ಪಾಲಿನಲ್ಲಿ ಅರ್ಧ ಪಾಲು ಮಾತ್ರ ಹೆಣ್ಣುಮಕ್ಕಳಿಗೆ ಹಕ್ಕು ಪ್ರಾಪ್ತವಾಗುತ್ತದೆ.

**ಅಧ್ಯಯನದ ಉದ್ದೇಶಗಳು**

- ಕೃಷಿ ಕುಟುಂಬದ ಮಹಿಳೆಯರ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ತಿಳಿಯುವುದು.
- ಕೃಷಿ ಕುಟುಂಬದ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳನ್ನು ತಿಳಿಯುವುದು.
- ಗ್ರಾಮೀಣ ಕೃಷಿಕ ಮಹಿಳೆಯರ ಭೂ ಒಡೆತನದ ವಿವರಗಳನ್ನು ತಿಳಿಯುವುದು

**ಅಧ್ಯಯನದ ಮಹತ್ವ**

- ಗ್ರಾಮೀಣ ಸಮಾಜದ ಅಧ್ಯಯನದಲ್ಲಿ ಲಿಂಗ–ಸಂಬಂಧಗಳಿಗೆ ಬಹಳ ಮಹತ್ವವಿದೆ.
- ಗ್ರಾಮೀಣ ಸ್ತ್ರೀಯರ ಉದ್ಯೋಗ ಸಹಭಾಗಿತ್ವದ ವಿಭಿನ್ನ ಮುಖಗಳನ್ನು ತಿಳಿದುಕೊಳ್ಳಬಹುದು
- ಕೃಷಿಯು ಗ್ರಾಮೀಣ ಜೀವನದ ಅವಿಭಾಜ್ಯ ಅಂಗವಾಗಿದೆ

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ವಿಧಾನ, ಸಂದರ್ಶನ ಅನುಸೂಚಿ, ಅವಲೋಕನ, ಗುಂಪು ಚರ್ಚೆ ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ವಿವಿಧ ಗ್ರಂಥಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಸಂಶೋಧನಾ ಲೇಖನಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ದೊರೆಯುವ ವರದಿಗಳು ಮತ್ತು ಅಂತರ್ಜಾಲ ಮೂಲದಿಂದ ಸಂಗ್ರಹಿಸಲಾಗಿದೆ.

**ಅಧ್ಯಯನ ಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ**

ಪ್ರಸ್ತುತ ಅಧ್ಯಯನವು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅತ್ತಿಮೊಗ್ಗೆ ಗ್ರಾಮವನ್ನು ಆಯ್ಕೆಮಾಡಿಕೊಂಡು ಈ ಗ್ರಾಮದಲ್ಲಿರುವ 200 ಕೃಷಿ ಕುಟುಂಬಗಳಲ್ಲಿ 50 ಮಹಿಳೆಯರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಮಾಹಿತಿ ವಿಶ್ಲೇಷಣೆ:**

**ಕೋಷ್ಟಕ 02: ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರ**

| ವಯಸ್ಸು | ಆವೃತ್ತಿ | ಶೇಕಡ |
|---|---|---|
| 25 ರಿಂದ 35 ವರ್ಷ | 10 | 20 |
| 35 ರಿಂದ 45 ವರ್ಷ | 15 | 30 |
| 45 ರಿಂದ 55 ವರ್ಷ | 20 | 40 |
| 55 ವರ್ಷ ಮೇಲ್ಪಟ್ಟವರು | 05 | 10 |
| **ಒಟ್ಟು** | **50** | **100.00** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು, 25 ರಿಂದ 35 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 20 ಇದ್ದು, 35 ರಿಂದ 45 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 30 ಇದ್ದು, 45 ರಿಂದ 55 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 40 ಇದ್ದು, 55 ವರ್ಷ ಮೇಲ್ಪಟ್ಟ ವಯಸ್ಸಿನವರು ಶೇಕಡ 10ರಷ್ಟಿದೆ. ಕೃಷಿ ಕಾರ್ಯಗಳು ಹೆಚ್ಚು ದೈಹಿಕ ಶ್ರಮದವಾಗಿರುವುದರಿಂದ ವಯಸ್ಸು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ ಇಲ್ಲಿ 35 ರಿಂದ 45 ಹಾಗೂ 45 ರಿಂದ 55 ವರ್ಷ ವಯಸ್ಸಿನವರ ಪ್ರಮಾಣ ಅಧಿಕವಾಗಿದೆ ಕಾರಣ ಇಲ್ಲಿ ಮಹಿಳೆಯರು ತಮ್ಮ ಕುಟುಂಬದ ನಿರ್ವಹಣೆಗಾಗಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಕ್ಕಳ ಮದುವೆಗಾಗಿ ಹಾಗೂ ತಮ್ಮದೇ ಆದಂತಹ ಸ್ವಂತ ಮನೆಯನ್ನು ಹೊಂದಬೇಕೆಂಬ ಉದ್ದೇಶದಿಂದ ಸ್ತ್ರೀಯರೇ ಹೆಚ್ಚು ಹೆಚ್ಚು ಕೃಷಿ ಕಾರ್ಯಗಳಲ್ಲಿ ತೊಡಗಿರುವುದು ಕಂಡುಬಂದಿದೆ.

**ಕೋಷ್ಟಕ 03: ಮಾಹಿತಿದಾರರ ವಿದ್ಯಾರ್ಹತೆಯ ವಿವರ**

| ವಿದ್ಯಾರ್ಹತೆ | ಆವೃತ್ತಿ | ಶೇಕಡ |
|---|---|---|
| ಅನಕ್ಷರತೆ | 05 | 10.00 |
| ಪ್ರಾಥಮಿಕ ಶಿಕ್ಷಣ | 30 | 60.00 |
| ಪ್ರೌಢ ಶಿಕ್ಷಣ | 10 | 20.00 |
| ಪದವಿ ಪೂರ್ವ ಶಿಕ್ಷಣ | 05 | 10.00 |
| ಪದವಿ ಶಿಕ್ಷಣ | 00 | 00.00 |
| **ಒಟ್ಟು** | **50** | **100.00** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ವಿದ್ಯಾರ್ಹತೆಯ ವಿವರಗಳನ್ನು ತಿಳಿಸಲಾಗಿದ್ದು. ಅನಕ್ಷರಸ್ಥರ ಪ್ರಮಾಣ ಶೇಕಡ 10 ಇದ್ದು ಇವರು ಹೆಚ್ಚು ಸಂಪ್ರದಾಯಸ್ಥರಾಗಿದ್ದು ಇವರು ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದು ತಮ್ಮನ್ನು ಹೆಚ್ಚು ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು

ಪಡೆದವರ ಪ್ರಮಾಣ ಶೇಕಡ 60ಇದ್ದು ಇವರು ತಮ್ಮನ್ನು ಹೆಚ್ಚು ಹೆಚ್ಚಾಗಿ ಕುಟುಂಬದ ಕೃಷಿಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಪ್ರೌಢಶಿಕ್ಷಣವನ್ನು ಪಡೆದವರ ಪ್ರಮಾಣ ಶೇಕಡ 20ಇದ್ದು, ಪದವಿಪೂರ್ವ ಶಿಕ್ಷಣವನ್ನು ಪಡೆದವರ ಪ್ರಮಾಣ ಶೇಕಡ 10 ಇದ್ದು ಪದವಿ ಶಿಕ್ಷಣವನ್ನು ಪಡೆದವರ ಪ್ರಮಾಣ ಶೂನ್ಯವಿದೆ. ಈ ಮೇಲಿನ ಕೋಷ್ಟಕದಲ್ಲಿ ನಮಗೆ ತಿಳಿಯುವುದೇನೆಂದರೆ ಮಹಿಳೆಯರ ವಿದ್ಯಾರ್ಹತೆಯು ಮಹತ್ತರವಾದ ಪಾತ್ರವಹಿಸುತ್ತದೆ. ಶಿಕ್ಷಿತ ಮಹಿಳೆಯರು ಯಾವಾಗಲು ಮನೆಯಲ್ಲಿ ಉತ್ತಮವಾದ ವಾತಾವರಣವನ್ನು ಸೃಷ್ಟಿಸುವ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಇದರಿಂದ ಅವರ ಮನೆಯಲ್ಲಿ ಮತ್ತು ಕೃಷಿಕಾರ್ಯಗಳಲ್ಲಿ ಸಹಾಯಕವಾಗುತ್ತದೆ. ಆದರೆ ಇಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರ ಪ್ರಮಾಣವೇ ಅಧಿಕವಾಗಿರುವುದರಿಂದ ಅವರು ತಮ್ಮ ಕುಟುಂಬದ ಬಗ್ಗೆ ಮತ್ತು ಕುಟುಂಬದ ಕೃಷಿ ಕಾರ್ಯಗಳಲ್ಲಿ ಪುರುಷರೊಂದಿಗೆ ತಾವು ಕೆಲಸಮಾಡಲು ಹೆಚ್ಚು ಗಮನಹರಿಸುತ್ತಾರೆ.

**ಕೋಷ್ಟಕ 04: ಮಾಹಿತಿದಾರರ ಧರ್ಮ ಅಥವಾ ಜಾತಿಗೆ ಸಂಬಂಧಿಸಿದ ವಿವರ**

| ಧರ್ಮ/ಜಾತಿಯ ವಿವರ | ಆವೃತ್ತಿ | ಶೇಕಡ |
|---|---|---|
| ಲಿಂಗಾಯತರು | 25 | 50.00 |
| ಮುಸಲ್ಮಾನರು | 10 | 20.00 |
| ಕುಂಬಾರರು | 10 | 20.00 |
| ಇತರೆ | 05 | 10.00 |
| **ಒಟ್ಟು** | **50** | **100.00** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಜಾತಿ/ಧರ್ಮಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು ಅತ್ತಿಮೊಗ್ಗೆ ಗ್ರಾಮದಲ್ಲಿ ಒಟ್ಟು 300 ಮನೆಗಳಿದ್ದು ಅದರಲ್ಲಿ ಲಿಂಗಾಯತರ ಮನೆಗಳೇ 150 ಇವೆ, ಮುಸಲ್ಮಾನರ ಕುಟುಂಬಗಳು 100 ಇವೆ ಹಾಗೂ ಕುಂಬಾರರ ಮನೆಗಳು 50 ಇವೇ, ಇಲ್ಲಿ ಹೆಚ್ಚಾಗಿ ಜನರು ತಮ್ಮ ಕುಲಕಸುಬುಗಳನ್ನೇ ಮಾಡುತ್ತಾರೆ ಕೃಷಿಯೇ ಪ್ರಧಾನ ಉದ್ಯೋಗ ಶೇಕಡ 50ರಷ್ಟು ಲಿಂಗಾಯತರು, ಶೇಕಡ 20ರಷ್ಟು ಮುಸಲ್ಮಾನರು, ಶೇಕಡ 20ರಷ್ಟು ಕುಂಬಾರ ಜಾತಿಗೆ ಸೇರಿದವರು, ಶೇ 10ರಷ್ಟು ಇತರೆ ಜಾತಿಗೆ ಸೇರಿದವರಾಗಿದ್ದಾರೆ.

**ಕೋಷ್ಟಕ 05: ಮಾಹಿತಿದಾರರ ಕುಟುಂಬ ಹೊಂದಿರುವ ಕೃಷಿ ಜಮೀನಿನ ವಿವರ**

| ಕೃಷಿ ಜಮೀನಿನ ವಿವರ | ಆವೃತ್ತಿ | ಶೇಕಡ |
|---|---|---|
| 1 ಎಕರೆ | 15 | 30.00 |
| 2 ಎಕರೆ | 15 | 30.00 |
| 3 ಎಕರೆ | 10 | 20.00 |
| 5 ಎಕರೆ | 05 | 10.00 |
| 5 ಎಕರೆ ಮೇಲ್ಪಟ್ಟು | 05 | 10.00 |
| **ಒಟ್ಟು** | **50** | **100.00** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಕುಟುಂಬ ಹೊಂದಿರುವ ಕೃಷಿ ಭೂಮಿಯ ವಿವರಗಳನ್ನು ತಿಳಿಸಲಾಗಿದ್ದು, ಕೃಷಿಯೇ ಗ್ರಾಮೀಣ ಜನರ ಜೀವನಾಧಾರವಾಗಿರುವುದರಿಂದ ಅನೇಕರು ತಮ್ಮದೇ ಆದ ಕೃಷಿ ಭೂಮಿಯನ್ನು ಹೊಂದಿರುತ್ತಾರೆ. ಅದರಲ್ಲಿ 1 ಎಕರೆ ಜಮೀನು ಹೊಂದಿದವರ ಪ್ರಮಾಣ ಶೇಕಡ 30ರಷ್ಟು, 2 ಎಕರೆ ಜಮೀನು ಹೊಂದಿರುವವರ ಪ್ರಮಾಣ ಶೇಕಡ 30ರಷ್ಟು, 3 ಎಕರೆ ಜಮೀನು ಹೊಂದಿರುವವರ ಪ್ರಮಾಣ ಶೇಕಡ 20 ರಷ್ಟು, 5 ಎಕರೆ ಜಮೀನು ಹೊಂದಿರುವವರ ಪ್ರಮಾಣ ಶೇಕಡ 10ರಷ್ಟು ಹಾಗೂ 5 ಎಕರೆ ಗಿಂತ ಹೆಚ್ಚು ಜಮೀನು ಹೊಂದಿರುವವರ ಪ್ರಮಾಣ ಶೇಕಡ 10ರಷ್ಟಿದೆ ಈ ಗ್ರಾಮದಲ್ಲಿ ಸಣ್ಣ ಹಿಡುವಳಿದಾರರ ಪ್ರಮಾಣವೇ ಅಧಿಕವಾಗಿದ್ದು, ಕೃಷಿಯೇ ಜೀವನಾಧಾರವಾಗಿರುವುದರಿಂದ ಮಹಿಳೆಯರೇ ಹೆಚ್ಚು ಕೃಷಿಯಲ್ಲಿ ತಮ್ಮ ಗಂಡಂದಿರ ಜೊತೆ ದುಡಿಯುವುದನ್ನು ಕಾಣಬಹುದಾಗಿದೆ.

**ಕೋಷ್ಟಕ 05 ಮಾಹಿತಿದಾರರ ಕುಟುಂಬದ ಮಹಿಳೆಯರು ಹೊಂದಿರುವ ಕೃಷಿ ಭೂ ಒಡೆತನದ ವಿವರ**

| ಕೃಷಿ ಭೂ ಒಡೆತನದ ವಿವರ | ಆವೃತ್ತಿ | ಶೇಕಡ |
|---|---|---|
| ತಂದೆ/ಮಾವನ ಹೆಸರಿನಲ್ಲಿ | 15 | 30.00 |
| ಪತಿಯ ಹೆಸರಿನಲ್ಲಿ | 20 | 40.00 |
| ಜಂಟಿ ಮಾಲಿಕತ್ವ | 10 | 20.00 |
| ಮಹಿಳೆಯ ಹೆಸರಿನಲ್ಲಿ | 05 | 10.00 |
| **ಒಟ್ಟು** | **50** | **100.00** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಕುಟುಂಬದ ಮಹಿಳೆಯರು ಹೊಂದಿರುವ ಕೃಷಿ ಭೂಮಿಯ ಒಡೆತನದ ವಿವರಗಳನ್ನು ತಿಳಿಸಲಾಗಿದ್ದು, ಕೃಷಿಯೇ ಗ್ರಾಮೀಣ ಜನರ ಜೀವನಾಧಾರವಾಗಿರುವುದರಿಂದ ಅನೇಕರು ತಮ್ಮದೇ ಆದ ಕೃಷಿ ಭೂಮಿಯನ್ನು ಹೊಂದಿರುತ್ತಾರೆ. ಶೇ30ರಷ್ಟು ತಂದೆ ಅಥವಾ ಮಾವನ ಹೆಸರಿನಲ್ಲಿ, ಶೇ40ರಷ್ಟು ಪತಿಯ ಹೆಸರಿನಲ್ಲಿ, ಶೇ20ರಷ್ಟು ಜಂಟಿ ಮಾಲಿಕತ್ವದಲ್ಲಿ, ಶೇ10ರಷ್ಟು ಮಹಿಳೆಯರ ಹೆಸರಿನಲ್ಲಿದೆ. ಇದಕ್ಕೆ ಕಾರಣ ನಮ್ಮ ಸಮಾಜ ಪುರುಷ ಪ್ರಧಾನ ಸಮಾಜ, ಹಾಗಾಗಿ ಆಸ್ತಿಯನ್ನು ಪುರುಷರ ಹೆಸರಿಗೆ ಮಾಡಲಾಗುತ್ತದೆ.

**ಅಧ್ಯಯನದಿಂದ ಲಭ್ಯವಾದ ಅಂಶಗಳು**

- ಈ ಅಧ್ಯಯನದಿಂದ ತಿಳಿದು ಬಂದ ಅಂಶಗಳೇನೆಂದರೆ 35 ವರ್ಷದಿಂದ 55 ವರ್ಷ ವಯಸ್ಸಿನವರ ಪ್ರಮಾಣವೇ ಶೇಕಡ 70ರಷ್ಟಿರುವುದು ಕಂಡುಬಂದಿದೆ.
- ಹೆಚ್ಚಿನ ಮಾಹಿತಿದಾರರು ಅಂದರೆ ಶೇಕಡ 60ರಷ್ಟು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದವರು ಮತ್ತು ಶೇಕಡ 10ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿದ್ದಾರೆ. ಕೃಷಿಯಲ್ಲಿ ಎಲ್ಲಾ ಜಾತಿಯ ಅಥವಾ ಧರ್ಮದ ಮಹಿಳೆಯರು ಕಂಡುಬಂದಿದ್ದಾರೆ.
- ಹೆಚ್ಚಿನ ಮಹಿಳೆಯರು ಅಂದರೆ ಶೇಕಡ 90ರಷ್ಟು ಕೃಷಿಕಾರ್ಯಗಳಲ್ಲಿ ತೊಡಗಿರುತ್ತಾರೆ.
- ಶೇಕಡ 10ರಷ್ಟು ಮಹಿಳೆಯರು ಮಾತ್ರ ಭೂ ಒಡೆತನದ ಹಕ್ಕನ್ನು ಹೊಂದಿದ್ದಾರೆ.

**ಸಲಹೆಗಳು**

ಕೃಷಿಯು ಗ್ರಾಮೀಣ ಜೀವನದ ಆಧಾರ, ಗ್ರಾಮೀಣ ಜನರ ಉದ್ಯೋಗ, ಆದಾಯದ ಮೂಲ ಎಲ್ಲವೂ ಕೃಷಿಯೇ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಕುಟುಂಬದ ಪುರುಷರೊಂದಿಗೆ ಸ್ತ್ರೀಯರೂ ಕೂಡ ಕೃಷಿಕಾರ್ಯಗಳಲ್ಲಿ ಹೆಚ್ಚಾಗಿ ತೊಡಗಿರುವುದು ಕಂಡುಬಂದಿದೆ. ಅದಕ್ಕೆ ಮುಖ್ಯ ಕಾರಣ ಜೀವನ ನಿರ್ವಹಣೆ, ಮಹಿಳೆಯರು ಹೆಚ್ಚು ಹೆಚ್ಚಾಗಿ ಕೃಷಿ ಕಾರ್ಯಗಳಲ್ಲಿ ತೊಡಗಿದ್ದರೂ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ.

- ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಸಲಹೆಗಳನ್ನು ನೀಡುವುದು.
- ಕುಟುಂಬವು ಅವರ ಸೇವೆಯನ್ನು ಪರಿಗಣಿಸಿ ಗೌರವಿಸಬೇಕು.
- ಮಹಿಳೆಯರಿಗೆ ಪೌಷ್ಟಿಕ ಆಹಾರ ಮತ್ತು ಹಣಕಾಸಿನ ನೆರವು ನೀಡುವುದು.
- ಕುಟುಂಬದ ನಿರ್ಧಾರಗಳಲ್ಲಿ ಅವರಿಗೆ ಆದ್ಯತೆಯನ್ನು ನೀಡುವುದು.
- ತರಬೇತಿ ಅಥವಾ ಉತ್ತಮ ಶಿಕ್ಷಣವನ್ನು ನೀಡುವುದು ಮತ್ತು ಹಣಕಾಸಿನ ನೆರವು ನೀಡುವುದು.
- ಭೂ ಒಡೆತನದ ಹಕ್ಕನ್ನು ಮಹಿಳೆಯರಿಗೂ ನೀಡುವುದು.

**ಪರಾಮರ್ಶನ ಗ್ರಂಥಗಳು**


- ದೋಷಿ, ಎಸ್.ಎಲ್., ಪಿ.ಸಿ.ಜೈನ್. (2019) *ರೂರಲ್ ಸೋಶಿಯಾಲಜಿ.* ರಾವತ್ ಪಬ್ಲಿಕೇಷನ್ಸ್,
- ನಾರಾಯಣ, ಎಂ. (2005). *ಗ್ರಾಮೀಣ ಸಮಾಜಶಾಸ್ತ್ರ.* ಚೇತನ ಬುಕ್ ಹೌಸ್.
- ಭೈರಪ್ಪ, ಕೆ. (2010). *ಪರಿವರ್ತನೆಯಲ್ಲಿನ ಗ್ರಾಮೀಣ ಭಾರತ.* ಸಪ್ನ ಬುಕ್ ಹೌಸ್.
- ಶಂಕರ್ ರಾವ್, ಚ.ನ. (2022). *ಭಾರತೀಯ ಗ್ರಾಮ ಜೀವನದ ಸಮಾಜಶಾಸ್ತ್ರ.* ಜೈ ಭಾರತ್ ಪ್ರಕಾಶನ
- ಶಂಕರ್ ರಾವ್, ಚ.ನ. (2016). *ಮಹಿಳಾ ಅಧ್ಯಯನ ಪರಿಚಯ.* ಜೈ ಭಾರತ್ ಪ್ರಕಾಶನ.
- ಪ್ರಜಾವಾಣಿ ದಿನ ಪತ್ರಿಕೆ (2026, ಮಾರ್ಚ್ 27)
- ಹಿಂದೂ ದಿನ ಪತ್ರಿಕೆ (2025, ಸೆಪ್ಟೆಂಬರ್ 30)